**<u>ಕರ್ನಾಟಕ ವಿಧಾನ ಪರಿಷತ್ತು</u>**

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 833 (838) |
| **ಮಾನ್ಯ ಸದಸ್ಯರ ಹೆಸರು** | ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ) |
| **ಉತ್ತರಿಸುವ ಸಚಿವರು** | ಉನ್ನತ ಶಿಕ್ಷಣ ಸಚಿವರು |
| **ಉತ್ತರಿಸಬೇಕಾದ ದಿನಾಂಕ** | 15.12.2025 |

| | **ಪ್ರಶ್ನೆ** | **ಉತ್ತರ** |
|---|---|---|
| ಅ) | ರಾಜ್ಯದಲ್ಲಿ ಒಟ್ಟು ಎಷ್ಟು ಸರ್ಕಾರಿ ವಿಶ್ವವಿದ್ಯಾಲಯಗಳಿವೆ; ಬೋಧಕ ಮತ್ತು ಬೋಧಕೇತರ ಹುದ್ದೆಗಳು ಸೇರಿದಂತೆ ಈ ವಿಶ್ವವಿದ್ಯಾಲಯಗಳ್ಲಲಿ ಎಷ್ಟು ಹುದ್ದೆಗಳು ಮಂಜೂರಾಗಿವೆ; ಈ ಪೈಕಿ ಪ್ರಸ್ತುತ ಖಾಲಿ ಇರುವ ಹುದ್ದೆಗಳಷ್ಟು; ಖಾಲಿ ಇರುವ ಹುದ್ದೆಗಳ ಭರ್ತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿಶ್ವವಿದ್ಯಾಲಯವಾರು ಸಮಗ್ರ ವಿವರ ನೀಡುವುದು) | ರಾಜ್ಯದಲ್ಲಿ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಡಿ ಒಟ್ಟು 32 ಸಾರ್ವಜನಿಕ ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ ಮಂಜೂರಾಗಿರುವ ಮತ್ತು ಖಾಲಿಯಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ವಿವರವನ್ನು **ಅನುಬಂಧ-1 ರಲ್ಲಿರಿಸಿದೆ.**<br><br>ಈ ಹುದ್ದೆಗಳನ್ನು ಭರ್ತಿ ಮಾಡುವ ವಿಷಯವನ್ನು ಒಳಗೊಂಡಂತೆ ರಾಜ್ಯದಲ್ಲಿರುವ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡುವಂತೆ ಸರ್ಕಾರದಿಂದ ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ಆರ್ಥಿಕ ಇಲಾಖೆ ಮತ್ತು ಉನ್ನತ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ವಿಶ್ವವಿದ್ಯಾಲಯಗಳ ಸಂಶೋಧನೆ, ಮೂಲಸೌಲಭ್ಯ, ಅನುದಾನ, ಪಿಂಚಣಿ ಹಾಗೂ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಲು ಅನುಕೂಲವಾಗುವಂತೆ ಅಗತ್ಯ ಹುದ್ದೆಗಳ ನೇಮಕಾತಿ ಹಾಗೂ ಇತ್ಯಾದಿ ಅವಶ್ಯಕ ವಿಷಯಗಳ ಕುರಿತು ಹಲವು ಸಭೆಗಳನ್ನು ನಡೆಸಿರುತ್ತದೆ. ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳನ್ನು ಆಡಳಿತಾತ್ಮಕ/ಶೈಕ್ಷಣಿಕ/ಸಂಶೋಧನಾತ್ಮಕ/ಆರ್ಥಿಕವಾಗಿ ಬಲವರ್ಧನೆಗೊಳಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ. |
| ಆ) | ವಿಶ್ವವಿದ್ಯಾಲಯಗಳಲ್ಲಿ ಕುಲಪತಿಗಳ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನದಲ್ಲಿದೆಯೇ; ಕುಲಪತಿ ಹುದ್ದೆಗಳು ಖಾಲಿಯಿರುವ ವಿಶ್ವವಿದ್ಯಾನಿಲಯಗಳು ಯಾವುವು; ಸರ್ಕಾರ ಕುಲಪತಿಗಳನ್ನು ಏಕೆ ನೇಮಕ ಮಾಡಿಲ್ಲ; | ರಾಜ್ಯದ ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯಡಿ ಬರುವ 32 ಸಾರ್ವಜನಿಕ ವಿಶ್ವವಿದ್ಯಾಲಯಗಳ ಪೈಕಿ 05 ವಿಶ್ವವಿದ್ಯಾಲಯಗಳಲ್ಲಿ ಕುಲಪತಿ ಹುದ್ದೆ ಖಾಲಿಯಿದ್ದು, ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಇಲಾಖೆಯು ಕ್ರಮವಹಿಸಿರುವ ಸಂಪೂರ್ಣ ಮಾಹಿತಿಯನ್ನು **ಅನುಬಂಧ-2ರಲ್ಲಿ** ವಿವರಿಸಲಾಗಿದೆ; |
| ಇ) | ಖಾಲಿ ಇರುವ ಕುಲಪತಿಗಳ ಹುದ್ದೆಗಳ ಭರ್ತಿಗೆ ಶೋಧನಾ ಸಮಿತಿ ರಚನೆಯಾಗಿದೆಯೇ; ಶೋಧನಾ ಸಮಿತಿ ರಚನೆ ಆಗದಿರುವ ವಿಶ್ವವಿದ್ಯಾನಿಲಯಗಳು ಯಾವುವು; ಶೋಧನಾ ಸಮಿತಿಯನ್ನು ಏಕೆ ರಚನೆ ಮಾಡಿಲ್ಲ | |

| | | |
|---|---|---|
| ಉ) | ಶೋಧನಾ ಸಮಿತಿ ರಚನೆ ಮಾಡಿ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಖಾಯಂ ಕುಲಪತಿಗಳನ್ನು ನೇಮಕ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಯಾವ ಕಾಲಮಿತಿಯೊಳಗೆ ಹುದ್ದೆ ಭರ್ತಿ ಮಾಡಲಾಗುವುದು? | |

**ಸಂಖ್ಯೆ: ಇಡಿ 369 ಯುಎನ್‌ಇ 2025**

(ಡಾ|| ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು

<u>ಅನುಬಂಧ-1</u>

| ಕ್ರ. ಸಂ | ವಿಶ್ವವಿದ್ಯಾಲಯದ ಹೆಸರು | ಮಂಜೂರಾದ ಹುದ್ದೆಗಳು | | ಖಾಲಿಯಿರುವ ಹುದ್ದೆಗಳು | |
|---|---|---|---|---|---|
| | | ಬೋಧಕ | ಬೋಧಕೇತರ | ಬೋಧಕ | ಬೋಧಕೇತರ |
| 1 | ಮೈಸೂರು ವಿಶ್ವವಿದ್ಯಾಲಯ, ಮೈಸೂರು | 571 | 799 | 391 | 396 |
| 2 | ಮಂಡ್ಯ ವಿಶ್ವವಿದ್ಯಾಲಯ, ಮಂಡ್ಯ | 92 | 253 | 92 | 253 |
| 3 | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು | 133 | 575 | 65 | 310 |
| 4 | ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | 206 | 433 | 171 | 278 |
| 5 | ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು | 31 | 268 | 0 | 169 |
| 6 | ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ | 139 | 102 | 55 | 72 |
| 7 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು | 71 | 62 | 33 | 24 |
| 8 | ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, | 21 | 35 | 13 | 18 |
| 9 | ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ | 15 | 19 | 15 | 19 |
| 10 | ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ | 224 | 591 | 82 | 366 |
| 11 | ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ | 164 | 178 | 33 | 141 |
| 12 | ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು | 273 | 547 | 150 | 374 |
| 13 | ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ | 272 | 168 | 272 | 168 |
| 14 | ಕನ್ನಡ ವಿಶ್ವವಿದ್ಯಾಲಯ, ಹಂಪಿ | 73 | 234 | 37 | 96 |
| 15 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ | 140 | 246 | 58 | 122 |
| 16 | ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ | 103 | 173 | 45 | 163 |
| 17 | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | 620 | 1201 | 422 | 860 |
| 18 | ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು | 365 | 1176 | 245 | 799 |
| 19 | ಬೆಂಗಳೂರು ನಗರ ವಿಶ್ವವಿದ್ಯಾಲಯ | 161 | 123 | 151 | 117 |
| 20 | ತುಮಕೂರು ವಿಶ್ವವಿದ್ಯಾಲಯ, ತುಮಕೂರು | 223 | 214 | 103 | 168 |
| 21 | ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ | 66 | 96 | 62 | 90 |
| 22 | ಡಾ. ಬಿ.ಆರ್. ಅಂಬೇಡ್ಕರ್ ವಿಶ್ವವಿದ್ಯಾಲಯ | 17 | 49 | 17 | 49 |
| 23 | ನೃಪತುಂಗ ವಿಶ್ವವಿದ್ಯಾಲಯ | 100 | 43 | 100 | 43 |
| 24 | ಹಾಸನ ವಿಶ್ವವಿದ್ಯಾಲಯ, ಹಾಸನ | 27 | 245 | 27 | 245 |
| 25 | ಚಾಮರಾಜನಗರ ವಿಶ್ವವಿದ್ಯಾಲಯ, ಚಾಮರಾಜನಗರ | 36 | 90 | 36 | 90 |
| 26 | ಬೀದರ್ ವಿಶ್ವವಿದ್ಯಾಲಯ, ಬೀದರ್ | 29 | 108 | 29 | 108 |
| 27 | ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ | 12 | 34 | 12 | 34 |
| 28 | ಕೊಡಗು ವಿಶ್ವವಿದ್ಯಾಲಯ, ಕೊಡಗು | 80 | 108 | 80 | 108 |
| 29 | ಬಾಗಲಕೋಟ ವಿಶ್ವವಿದ್ಯಾಲಯ ಜಮಖಂಡಿ | 12 | 51 | 12 | 51 |
| 30 | ಹಾವೇರಿ ವಿಶ್ವವಿದ್ಯಾಲಯ, ಹಾವೇರಿ | 59 | 167 | 24 | 167 |
| 31 | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ | 228 | 425 | 92 | 130 |
| 32 | ಯುವಿಸಿಇ ವಿಶ್ವವಿದ್ಯಾಲಯ | 139 | 294 | 74 | 267 |
| | **ಒಟ್ಟು** | **4702** | **9107** | **2997** | **6295** |

ಅನುಬಂಧ-2

| ಕುಲಪತಿಗಳ ಹುದ್ದೆ ಖಾಲಿ ಇರುವ ವಿಶ್ವವಿದ್ಯಾಲಯ | ಯಾವ ದಿನಾಂಕದಿಂದ ಖಾಲಿ ಇದೆ | ಅರ್ಜಿ ಆಹ್ವಾನಿಸಿರುವ ಮಾಹಿತಿ | ಸ್ವೀಕೃತ ವಾಗಿರುವ ಅರ್ಜಿಗಳ ಸಂಖ್ಯೆ | ಶೋಧನಾ ಸಮಿತಿ ರಚನೆಯಾಗಿರುವ ಮಾಹಿತಿ | ಯಾವ ಕಾಲಮಿತಿಯೊಳಗೆ ಈ ವಿಶ್ವವಿದ್ಯಾಲಯಗಳಿಗೆ ಪೂರ್ಣ ಪ್ರಮಾಣದಲ್ಲಿ ಕುಲಪತಿಗಳನ್ನು ನೇಮಕ ಮಾಡಲಾಗುವುದು | ವಿಶ್ವವಿದ್ಯಾಲಯಕ್ಕೆ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಲ್ಲಿರಿಸಿರುವ ಕುಲಪತಿಗಳ ವಿವರ |
|---|---|---|---|---|---|---|
| ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ | 21.02.2025 | ಅರ್ಜಿ ಆಹ್ವಾನಿಸಲಾಗಿದೆ. | 15 | ಶೋಧನಾ ಸಮಿತಿಯನ್ನು ದಿನಾಂಕ: 01.04.2025ರಂದು ರಚಿಸಲಾಗಿದೆ. | ನೇಮಕಾತಿ ಪ್ರಕ್ರಿಯೆ ಪ್ರಸ್ತುತ ಚಾಲ್ತಿಯಲ್ಲಿರುತ್ತದೆ. | Dr. Nagesh V. Bettakote |
| ಬೆಂಗಳೂರು ಉತ್ತರ ವಿಶ್ವವಿದ್ಯಾಲಯ | 01.12.2025 | ಅರ್ಜಿ ಆಹ್ವಾನಿಸಲಾಗಿದೆ. | 72 | ಶೋಧನಾ ಸಮಿತಿಯನ್ನು ದಿನಾಂಕ: 01.04.2025ರಂದು ರಚಿಸಲಾಗಿದೆ. | ನೇಮಕಾತಿ ಪ್ರಕ್ರಿಯೆ ಪ್ರಸ್ತುತ ಚಾಲ್ತಿಯಲ್ಲಿರುತ್ತದೆ. | Dr. D. Kumudaa, Professor, Department of Economics, Bengaluru North University |
| ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ | 09.11.2025 | ಇಲ್ಲ | -- | ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 14(2) ರನ್ವಯ ಶೋಧನಾ ಸಮಿತಿಯನ್ನು ರಚಿಸಲು ಘನತೆವೆತ್ತ ರಾಜ್ಯಪಾಲರಿಂದ ವಿಶ್ವವಿದ್ಯಾಲಯದಿಂದ ಮತ್ತು ಯುಜಿಸಿ ನಾಮನಿರ್ದೇಶನಗಳು ಸ್ವೀಕೃತವಾಗಿದ್ದು, ರಾಜ್ಯ ಸರ್ಕಾರದ ನಾಮನಿರ್ದೇಶನ ಮಾಡಲು ಬಾಕಿಯಿರುತ್ತದೆ. | ಶೋಧನಾ ಸಮಿತಿ ರಚನೆ ಚಾಲ್ತಿಯಲ್ಲಿರುತ್ತದೆ. | Prof. D Govindappa, Director School of Commerce, Maharani Cluster University. |
| ಮಂಡ್ಯ ವಿಶ್ವವಿದ್ಯಾಲಯ | 09.11.2024 | | | | | Prof. K. Shivachittappa, Professor of Economics, PG Centre, Tubinakere campus, Mandya |
| ನೃಪತುಂಗ ವಿಶ್ವವಿದ್ಯಾಲಯ | 15.11.2024 | | | | | Prof. Fajeeha Sulthana, Director of Languages and professor in Urdu, Nrupatunga University. |